# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನ ಸಂಸ್ಥೆ

'ವಿಜ್ಞಾನ ಭವನ', ನಂ.24/2, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

ದೂರವಾಣಿ : 080–26718939, ಮೊ : 9483549159 ಇ–ಮೇಲ್ : krvp.info@gmail.com ವೆಬ್‌ಸೈಟ್ : www.krvp.in

ಮಹಾಪೋಷಕರು : 'ಭಾರತ ರತ್ನ' ಪ್ರೊ|| ಸಿ.ಎನ್.ಆರ್. ರಾವ್ FRS

ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕರು ಹಾಗೂ ಪ್ರಧಾನ ಮಂತ್ರಿಗಳ ವೈಜ್ಞಾನಿಕ ಸಲಹಾ ಮಂಡಳಿಯ ಅಧ್ಯಕ್ಷರು

| ಗಿರೀಶ್ ಬಿ. ಕಡ್ಲೇವಾಡ<br>ಅಧ್ಯಕ್ಷರು | ಬಿ. ದೊಡ್ಡಬಸಪ್ಪ<br>ಹೆಚ್.ಜಿ. ಹುದ್ದಾರ್<br>ಉಪಾಧ್ಯಕ್ಷರು | ಸಿ. ಕೃಷ್ಣೇಗೌಡ<br>ಗೌರವ ಕಾರ್ಯದರ್ಶಿ | ಶ್ರೀನಾಥ್ ಬಿ.ಎನ್.<br>ಜಂಟಿ ಕಾರ್ಯದರ್ಶಿ | ಈ. ಬಸವರಾಜು<br>ಖಜಾಂಚಿ |
|---|---|---|---|---|

ಕರಾವಿಪ ಸಂಖ್ಯೆ : 1.5/AGM/2022–23/8872 ದಿನಾಂಕ : 08.06.2022

ಮಾನ್ಯ ಪದಾಧಿಕಾರಿಗಳು
ಕಾರ್ಯಕಾರಿ ಸಮಿತಿ ಸದಸ್ಯರು,
ದಾನಿ ಸದಸ್ಯರು, ದಾನಿ ಸಂಘ ಸಂಸ್ಥೆಯ ಪ್ರತಿನಿಧಿಗಳು
ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳು, ಘಟಕಗಳ ಸಂಚಾಲಕರು
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ಮಾನ್ಯರೆ,

ವಿಷಯ : 2020–21 40ನೇ ಸರ್ವದಸ್ಸ್ಯರ ವಾರ್ಷಿಕ ಮಹಾಸಭೆಯ ನಡವಳಿ ಕುರಿತು.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 40ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 27.03.2022 ರಂದು ಬೆಳಿಗ್ಗೆ 10.00 ಗಂಟೆಗೆ ಯುವರಾಜ ಕಾಲೇಜು ಸಭಾಂಗಣ, ಝಾನ್ಸಿ ಲಕ್ಷ್ಮೀಬಾಯಿ ರಸ್ತೆ, ಮೈಸೂರು 570 005 ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯ ನಡವಳಿಯನ್ನು ಈ ಪತ್ರದೊಂದಿಗೆ ಕರಾವಿಪದ ಜಾಲತಾಣವಾದ www.krvp.in ನಲ್ಲಿ ಪ್ರತಿವರ್ಷದಂತೆ ಈ ವರ್ಷವು ತಮ್ಮ ಮಾಹಿತಿಗಾಗಿ ಪ್ರಕಟಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಸಿ. ಕೃಷ್ಣೇಗೌಡ)
ಗೌರವ ಕಾರ್ಯದರ್ಶಿ

# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನಭವನ, ನಂ.24/2 ಮತ್ತು 24/3, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ **2020–21ನೇ** ಸಾಲಿನ **40ನೇ** ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 27.03.2022 ರಂದು ಭಾನುವಾರ ಬೆಳಿಗ್ಗೆ 10–00 ಗಂಟೆಗೆ ಯುವರಾಜ ಕಾಲೇಜು ಸಭಾಂಗಣ, ಮುಡಾ ಕಚೇರಿ ಪಕ್ಕ, ಝಾನ್ಸಿ ಲಕ್ಷ್ಮೀಬಾಯಿ ರಸ್ತೆ, ಮೈಸೂರು ಇಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ವಿಜ್ಞಾನ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗಿರೀಶ ಕಡ್ಲೇವಾಡ ಇವರು ವಹಿಸಿದ್ದರು. ಸಭೆಯ ನಡವಳಿಗಳು ಈ ಕೆಳಕಂಡಂತಿವೆ.

**ಸಭೆಯಲ್ಲಿ ಹಾಜರಿದ್ದವರು:**

1. ಡಾ. ಆರ್.ಎಸ್. ಎಲಿ, ವಿಜಯಪುರ.
2. ಶ್ರೀ ಕೃಷ್ಣೇಗೌಡ, ಮೈಸೂರು.
3. ಶ್ರೀ ಹೆಚ್.ಜಿ. ಹುದ್ದಾರ್, ಬಾಗಲಕೋಟೆ.
4. ಶ್ರೀ ಜಿ.ಬಿ. ಸಂತೋಷ್ ಕುಮಾರ್, ಮೈಸೂರು.
5. ಶ್ರೀ ಬಿ. ದೊಡ್ಡಬಸಪ್ಪ, ಬಾಗಲಕೋಟೆ.
6. ಶ್ರೀ ಡಿ. ಕೃಷ್ಣಚೈತನ್ಯ, ಕೊಡಗು.
7. ಶ್ರೀ ಚೆಲುವರಾಜು ಎಚ್.ಸಿ., ಮೈಸೂರು.
8. ಶ್ರೀ ಎಚ್.ಎಸ್.ಟಿ. ಸ್ವಾಮಿ, ಚಿತ್ರದುರ್ಗ.
9. ಶ್ರೀ ಬಿ.ಎನ್. ಶ್ರೀನಾಥ್, ಬೆಂಗಳೂರು.
10. ಶ್ರೀ ಎನ್. ನಾಗರಾಜ, ಮೈಸೂರು.
11. ಶ್ರೀ ಈ. ಬಸವರಾಜು, ಹಾಸನ.
12. ಡಾ. ಶ್ಯಾಮೇಶ್ ಎ.ಎಂ., ಮೈಸೂರು.
13. ಶ್ರೀ ಅಭಿಷೇಕ್ ಎ.ಎಸ್., ಚಾಮರಾಜನಗರ.
14. ಶ್ರೀ ಸಿದ್ಧರಾಜು ಸಿ., ಬೆಂಗಳೂರು.
15. ಡಾ. ಜಿ. ವೆಂಕಟೇಶ್, ಬೆಂಗಳೂರು.
16. ಶ್ರೀ ಸಂತೋಷ್, ಮೈಸೂರು.
17. ಶ್ರೀ ರವೀಂದ್ರನಾಥ ಸಿರಿವರ, ಬೆಂಗಳೂರು.
18. ಡಾ. ಜಿ. ಬೈರೇಗೌಡ, ಬೆಂಗಳೂರು.
19. ಶ್ರೀ ಎಂ.ಇ. ಮೊಹಿದ್ದೀನ್, ಕೊಡಗು.
20. ಶ್ರೀ ಕೆ.ವಿ. ಕೃಷ್ಣಮೂರ್ತಿ, ಮೈಸೂರು.
21. ಶ್ರೀ ಬಿ.ಎಸ್. ಮೀನಾಕ್ಷಿ, ಮೈಸೂರು.
22. ಶ್ರೀ. ಕೆ.ವಿ. ಶ್ರೀಕಾಂತ, ಬೆಂಗಳೂರು ಗ್ರಾಮಾಂತರ.
23. ಶ್ರೀ ಟಿ. ಸುರೇಶ, ಮೈಸೂರು.
24. ಶ್ರೀ ತೇಜಸ್ ಗೌಡ ಆರ್.
25. ಶ್ರೀ ಬಾಲಕೃಷ್ಣೇಗೌಡ.
26. ಶ್ರೀ ಮುಕುಂದ, ಮೈಸೂರು.
27. ಪ್ರೊ॥ ವಿ. ಜಗನ್ನಾಥ್, ಮೈಸೂರು.
28. ಶ್ರೀಮತಿ ಸುಷ್ಮಿತಾ, ಮೈಸೂರು.
29. ಶ್ರೀ ಗಿರೀಶ ಕಡ್ಲೇವಾಡ, ಕಲಬುರಗಿ
30. ಶ್ರೀ ಶಂಭುಲಿಂಗಶೆಟ್ಟಿ ಕೆ., ಮೈಸೂರು.
31. ಶ್ರೀ ಮಹೇಶ್ ಕುಮಾರ್ ವಿ. ದೇವಣಿ, ಕಲಬುರಗಿ
32. ಶ್ರೀ ಪುರಂದರ ಸಿ., ಮೈಸೂರು.
33. ಶ್ರೀ ಸಿ.ಎಸ್. ಮಹಾಬಲೇಶ್ವರಪ್ಪ, ಬೆಂಗಳೂರು.
34. ಶ್ರೀ ಅನ್ನದಾನೇಶ ವಿ. ಹಳ್ಳಿಕೇರಿ, ಗದಗ.
35. ಶ್ರೀ ರವಿಕುಮಾರ್ ಬಿ., ಮೈಸೂರು.
36. ಶ್ರೀ ಮಂಜುನಾಥ್ ಎನ್.ಆರ್., ಮೈಸೂರು.
37. ಶ್ರೀಮತಿ ಹೇಮಾ ಕುಲಕರ್ಣಿ, ಬೆಳಗಾವಿ.
38. ಶ್ರೀ ವಿ.ಬಿ. ಗುಡೂರ, ಬೆಳಗಾವಿ
39. ಶ್ರೀ ಟಿ.ಜಿ. ಪ್ರೇಮ್‌ಕುಮಾರ್, ಕೊಡಗು.
40. ಡಾ. ರಾಮಚಂದ್ರ, ಮಂಡ್ಯ.
41. ಶ್ರೀಮತಿ ಶುಭಮಂಗಳ ಪಿ. ಭಟ್, ಬೆಂಗಳೂರು.
42. ಶ್ರೀ ಲಕ್ಷ್ಮೀಕಾಂತ ಎಂ.ಎಸ್., ಮೈಸೂರು.
43. ಶ್ರೀಮತಿ ಶ್ರೀಮತಿ ಹರಿಪ್ರಸಾದ್, ಮೈಸೂರು.
44. ಶ್ರೀಮತಿ ಮೀನಾಕ್ಷಿ ಕುಡಸೋಮಣ್ಣವರ, ಬೆಳಗಾವಿ.
45. ಶ್ರಿ ಶಿವಾನಂದ ಬಿ. ಕುಡಸೋಮಣ್ಣವರ, ಬೆಳಗಾವಿ.
46. ಶ್ರೀ ಮಹಾಂತೇಶ್ ಮಟಳ್ಳಿ, ಮೈಸೂರು.
47. ಡಾ. ಶೇಖರ್ ನಾಯಕ್ ಆರ್., ಮೈಸೂರು.
48. ಪ್ರೊ॥ ಎಸ್.ಎಸ್. ಮಾಲಿನಿ, ಮೈಸೂರು.
49. ಶ್ರೀಮತಿ ಶೈಲಜ ಎಚ್.ಸಿ., ಮೈಸೂರು.
50. ಶ್ರೀಮತಿ ಮಂಜುಳಾ ಎಚ್.ಎಸ್., ಮೈಸೂರು.
51. ಡಾ. ಮಹೇಶ್, ಎಂ.ಎಸ್. ಮೈಸೂರು.
52. ಶ್ರೀ ವಿ. ನಾಗೇಂದ್ರ, ಮೈಸೂರು.
53. ಶ್ರೀಮತಿ ಎಲ್. ಪ್ರಭಾವತಿ
54. ಶ್ರೀ ಮನೋಜ್, ಬೆಂಗಳೂರು ಗ್ರಾಮಾಂತರ.
55. ಶ್ರೀ ಪ್ರಭು ಎಸ್. ಮಠ, ಬೆಂಗಳೂರು.
56. ಶ್ರೀ ಜಿ.ಎಂ. ಪಂಚಾಕ್ಷರಿ, ಬೆಂಗಳೂರು.
57. ಶ್ರೀ ಆರ್.ಜಿ. ಪಾಟೀಲ, ಚಿಕ್ಕೋಡಿ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 40ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ ದಿನಾಂಕ 27.03.2022 ರಂದು ಮೈಸೂರಿನ ಯುವರಾಜ ಕಾಲೇಜಿನ ಸಭಾಂಗಣದಲ್ಲಿ ಜರುಗಿತು. ಸಭೆಯ **ಪ್ರಾರಂಭದಲ್ಲಿ ಅಗತ್ಯ ಕೋರಂ ಇಲ್ಲದ ಕಾರಣ ಸಭೆಯನ್ನು ಅರ್ಧ ಗಂಟೆ ಮುಂದೂಡಿ ನಂತರ ಪ್ರಾರಂಭಿಸಲಾಯಿತು.**

1. **ಸ್ವಾಗತ :** ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಜರುಗಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 40ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಉಪಸ್ಥಿತರಿದ್ದ ವಿಜ್ಞಾನ ಪರಿಷತ್ತಿನ ಎಲ್ಲಾ ದಾನಿ ಸದಸ್ಯರನ್ನು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಪದಾಧಿಕಾರಿಗಳನ್ನು ಕರಾವಿಪ ಅಧ್ಯಕ್ಷರಾದ ಶ್ರೀ ಗಿರೀಶ ಕಡ್ಲೇವಾಡರವರು ಸ್ವಾಗತಿಸಿದರು.

ಸ್ವಾಗತದ ನಂತರ ಪ್ರಾಸ್ತಾವಿಕವಾಗಿ ಮಾತನಾಡಿದ ಅಧ್ಯಕ್ಷರು 2020–21ನೇ ಸಾಲಿನ ಆರ್ಥಿಕ ವರ್ಷದಲ್ಲಿ ವಿಜ್ಞಾನ ಪರಿಷತ್ತಿನ ವತಿಯಿಂದ ಕೈಗೊಳ್ಳಲಾದ ವೈಜ್ಞಾನಿಕ ಕಾರ್ಯಚಟುವಟಿಕೆಗಳ ವರದಿ ಹಾಗೂ ಲೆಕ್ಕಪರಿಶೋಧಕರ ಆಡಿಟ್ ವರದಿಗಳನ್ನು ತಮ್ಮ ಅನುಮೋದನೆಗಾಗಿ ಇಂದು ತಮ್ಮೆಲ್ಲರ ಸಮ್ಮುಖದಲ್ಲಿ ಮಂಡಿಸಲಾಗುತ್ತಿದೆ. 2020–21ನೇ ಆರ್ಥಿಕ ವರ್ಷದಲ್ಲಿ ಕಲೆ, ವಿಜ್ಞಾನ, ಸಂಸ್ಕೃತಿ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಪ್ರತ್ಯೇಕವಾಗಿ ಅಪಾರ ಸೇವೆಯನ್ನು ಸಲ್ಲಿಸಿದ ಹಲವಾರು ಮಹನೀಯರು ಅಗಲಿದ ವಿಷಾದಕರ ಸಂಗತಿಯನ್ನು ಸಭೆಯೊಂದಿಗೆ ಹಂಚಿಕೊಂಡರು. ಭಾರತದ ಮಾಜಿ ರಾಷ್ಟ್ರಪತಿ ಪದ್ಮಭೂಷಣ ಶ್ರೀ ಪ್ರಣಬ್ ಮುಖರ್ಜಿ, ಖ್ಯಾತ ಹಿನ್ನೆಲೆ ಗಾಯಕ ಎಸ್. ಪಿ. ಬಾಲಸುಬ್ರಮಣ್ಯಂ, ಇಸ್ರೊ ವಿಜ್ಞಾನಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಸಹೋದ್ಯೋಗಿ ಡಾ. ರಾಮಭದ್ರನ್ ಅರವಮುಡನ್, ವಿಜ್ಞಾನ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಶ್ರೀ ಪ್ರಕಾಶ ಲಕ್ಕಶೆಟ್ಟಿ, ಶ್ರೀ ಸೂರ್ಯಪ್ರಕಾಶ ಘನಾತೆ ಅವರು ಕೋವಿಡ್‌ನಿಂದಾಗಿ ನಿಧನ ಹೊಂದಿದ್ದಾರೆ ಎಂದು ಅಧ್ಯಕ್ಷರು ತಿಳಿಸಿದರು ಹಾಗೂ ಅಗಲಿದ ಮಹನೀಯರಿಗೆ ಒಂದು ನಿಮಿಷದ ಮೌನವನ್ನು ಆಚರಿಸುವುದರ ಮೂಲಕ ಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂತರ ಅಧ್ಯಕ್ಷರು ಮಾತನಾಡುತ್ತಾ ಇಡೀ ಜಗತ್ತನ್ನೇ ತಲ್ಲಣಿಸಿದ್ದ ಕೋವಿಡ್ 19ಗೆ ಸಂಬಂಧಿಸಿದ ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಲಸಿಕೆಯನ್ನು ಅತೀ ಕಡಿಮೆ ಅವಧಿಯಲ್ಲಿ 100 ಕೋಟಿ ಡೋಸ್ ವಿತರಿಸಿದ, ಅದರಲ್ಲೂ 12–18 ವಯೋಮಾನದ ವಿದ್ಯಾರ್ಥಿಗಳಿಗಾಗಿ ವಿಶೇಷ ಲಸಿಕೆ ಅಭಿವೃದ್ಧಿ ಪಡಿಸುವುದರ ಜೊತೆಗೆ ವಿದೇಶಕ್ಕೂ ರಫ್ತು ಮಾಡುವಲ್ಲಿ ಯಶಸ್ವಿಯಾದ ಭಾರತದ ಹೆಮ್ಮೆಯ ವಿಜ್ಞಾನಿಗಳನ್ನು, ಸಂಬಂಧಪಟ್ಟ ಔಷಧಿ ಕಂಪನಿಗಳನ್ನು ಹಾಗೂ ಭಾರತ ಸರ್ಕಾರವನ್ನು ಅಭಿನಂದಿಸಿದರು ಹಾಗೆಯೆ ವಿಜ್ಞಾನ, ಕೃಷಿ, ಶಿಕ್ಷಣ, ವೈದ್ಯಕೀಯ ಹಾಗೂ ಪರಿಸರ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ನಮ್ಮ ರಾಜ್ಯದವರೇ ಆದ ಕೆ.ಎಸ್.ಟಿ.ಎ ನಿರ್ದೇಶಕರಾದ ಡಾ. ಎಸ್. ಅಯ್ಯಪ್ಪನ್, ಶ್ರೀ ಅಬ್ದುಲ್ ಖಾದರ್ ನಡಕಟ್ಟಿನ್ ಹಾಗೂ ಶ್ರೀ ಮಹಾಲಿಂಗ ನಾಯ್ಕ, ಶ್ರೀಮತಿ ತುಳಸಿ ಗೌಡ, ಹರಳೇಕರ ಹಾಜಬ್ಬ, ಡಾ. ಬಿ. ಎನ್. ಗಂಗಾಧರ, ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಮುಡಿಗೇರಿಸಿಕೊಂಡ ವಿಜ್ಞಾನಿ ಡಾ. ಎಚ್.ಎಸ್. ಸಾವಿತ್ರಿ ಹಾಗೂ ಡಾ. ಜೆ. ಯು. ಕುಲಕರ್ಣಿ, ಕರ್ನಾಟಕ ಸರ್ಕಾರ ನೀಡುವ ಪ್ರತಿಷ್ಠಿತ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿಗೆ ಭಾಜನರಾದ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ. ಎನ್. ಮಂಜುನಾಥ, ಡಾ. ರಾಜಾರಾಮಣ್ಣ ಪ್ರಶಸ್ತಿ ಪಡೆದುಕೊಂಡ ಸೆಂಟರ್ ಫಾರ್ ನ್ಯಾನೋ ಅಂಡ್ ಸೈನ್ಸಸ್‌ನ ನಿರ್ದೇಶಕರಾದ ಪ್ರೊ. ಜಿ. ಯು. ಕುಲಕರ್ಣಿ ಹಾಗೂ ನಿಮಾನ್ಸ್ ಮುಖ್ಯಸ್ಥರಾದ ಡಾ. ಪ್ರತಿಮಾ ಮೂರ್ತಿ ಅವರನ್ನು ಹಾಗೂ ಸರ್ ಸಿ. ವಿ. ರಾಮನ್ ಪ್ರಶಸ್ತಿಗೆ ಭಾಜನರಾದ ಬಾಲವಿಜ್ಞಾನ ಪತ್ರಿಕೆಯೆ ಲೇಖಕರಾದ ಡಾ॥ ಎಮ್ ಎಮ್ ಶ್ರೀನಿವಾಸ ಭರತ್ ಅವರುಗಳನ್ನು ಅಧ್ಯಕ್ಷರು ಅಭಿನಂದಿಸಿದರು.

ಕೋವಿಡ್–19 ಪ್ರಭಾವ ರಾಜ್ಯದಲ್ಲಿ 2020–21ನೇ ಶೈಕ್ಷಣಿಕ ವರ್ಷದಲ್ಲಿ ತೀವ್ರವಾಗಿ ಇದ್ದುದರಿಂದ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಿಜ್ಞಾನದ ಪ್ರಸಾರದ ಕಾರ್ಯ ಸವಾಲಾಗಿ ಪರಿಣಮಿಸಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಜ್ಞಾನ ಪರಿಷತ್ತು ವೆಬಿನಾರ್‌ಗಳ ಮೂಲಕ ಜನರನ್ನು ತಲುಪುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಕೋವಿಡ್ 19 ತೀವ್ರ ಸ್ವರೂಪದಲ್ಲಿದ್ದಾಗ ಪ್ರಾರಂಭಿಸಿದ ವೆಬಿನಾರ್ ನಿರಂತರವಾಗಿ ಆಯೋಜನೆಗೊಂಡು ಈಗ 100 ರ ಗಡಿ ತಲುಪಿದೆ ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು. ವಿಜ್ಞಾನ ಪರಿಷತ್ತಿನ ಮುಖವಾಣಿಯಾಗಿರುವ ಬಾಲವಿಜ್ಞಾನ ಮಾಸಪತ್ರಿಕೆಗೆ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಹಾಗೂ ರೆಕಾರ್ಡ್ ಹೋಲ್ಡರ್ಸ್ ರಿಪಬ್ಲಿಕ್, ಯುಕೆನಿಂದ ಅಂತರಾಷ್ಟ್ರೀಯ ಮನ್ನಣೆ ದೊರಕಿದೆ ಎಂದು ಅಧ್ಯಕ್ಷರು ಸಭೆಯಲ್ಲಿ ಸಂತಸವನ್ನು ವ್ಯಕ್ತಪಡಿಸಿದರು. ಅಧ್ಯಕ್ಷರ ಸ್ವಾಗತದ ನಂತರ ಈ ಕೆಳಕಂಡ ಕಾರ್ಯಸೂಚಿಯನ್ವಯ ಚರ್ಚೆಗಳು ಜರುಗಿದವು.

2. **2019–20ನೇ ಸಾಲಿನ 39ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡವಳಿ ಹಾಗೂ ತತ್ಸಂಬಂಧ ಕೈಗೊಂಡ ಅನುಸರಣಾ ಕ್ರಮ ಕುರಿತು ಚರ್ಚೆ ಹಾಗೂ ಅನುಮೋದನೆ.**

ದಿನಾಂಕ 31.01.2021 ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು ಇಲ್ಲಿ ಜರುಗಿದ ಕರಾವಿಪದ 2019–20ನೇ ಸಾಲಿನ 39ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ನಡವಳಿಗೆ

ಸಂಬಂಧಿಸಿದಂತೆ ಅನುಷ್ಠಾನ ವರದಿಯನ್ನು ಗೌರವ ಕಾರ್ಯದರ್ಶಿ ಶ್ರೀ ಸಿ. ಕೃಷ್ಣೇಗೌಡ ಇವರು ಸಭೆಯಲ್ಲಿ ಮಂಡಿಸಿದರು ಹಾಗೂ ಲಿಖಿತ ಅನುಷ್ಠಾನ ವರದಿಯನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ವಿತರಿಸಲಾಯಿತು. ಚರ್ಚೆಯ ನಂತರ ಸದಸ್ಯರು ಅನುಷ್ಠಾನ ವರದಿಗೆ ಅನುಮೋದನೆ ನೀಡಿದರು.
ಸೂಚಕರು : ಡಾ. ಶೇಖರ್ ನಾಯಕ್, ಮೈಸೂರು ಅನುಮೋದಕರು : ಶ್ರೀ ಮೊಹಿನುದ್ದೀನ್, ಕೊಡಗು.

3. **2020–21ನೇ ಸಾಲಿನ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯಚಟುವಟಿಕೆಗಳ ಕುರಿತು ಗೌರವ ಕಾರ್ಯದರ್ಶಿಯವರಿಂದ ವಾರ್ಷಿಕ ವರದಿ ಮಂಡನೆ ಹಾಗೂ ಅನುಮೋದನೆ.**

2020–21ನೇ ಸಾಲಿನ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯಚಟುವಟಿಕೆಗಳ ವರದಿಯನ್ನು ಗೌರವ ಕಾರ್ಯದರ್ಶಿಯವರು ಸಭೆಯಲ್ಲಿ ಮಂಡಿಸಿದರು. ಈ ಕುರಿತಾದ ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರು ಈ ಕೆಳಗಿನಂತೆ ಅಭಿಪ್ರಾಯಪಟ್ಟರು.

**ಎಂ.ಇ. ಮೊಹಿನುದ್ದೀನ್, ಕೊಡಗು :** 2020–21ನೇ ಸಾಲಿನಲ್ಲಿ ಎಷ್ಟು ಕಾರ್ಯಕಾರಿ ಸಮಿತಿ ಸಭೆಗಳು ಜರುಗಿವೆ ಎಂಬ ಮಾಹಿತಿ ವಾರ್ಷಿಕ ವರದಿಯಲ್ಲಿಲ್ಲ. ಇದುವರೆಗೂ ಎಷ್ಟು ಜಿಲ್ಲಾ ಸಮಿತಿಗಳು ರಚನೆಯಾಗಿವೆ ಹಾಗೂ ಜಿಲ್ಲಾ ಸಮಿತಿಗಳ ರಚನಾ ಪ್ರಕ್ರಿಯೆ ಹಾಗೂ ವಾರ್ಷಿಕ ಮಹಾಸಭೆಯ ಕಾರ್ಯಸೂಚಿ ವಿಳಂಬವಾಗಿ ತಲುಪಲು ಕಾರಣವೇನು ಎಂದು ಪ್ರಶ್ನಿಸಿದರು.

**ಅಧ್ಯಕ್ಷರ ಸ್ಪಷ್ಟೀಕರಣ :** ಇದುವರೆಗೂ ವಿಜ್ಞಾನ ಪರಿಷತ್ತಿನ ವಾರ್ಷಿಕ ವರದಿಯಲ್ಲಿ ಕಾರ್ಯಕಾರಿ ಸಮಿತಿ ಸಭೆಗಳು ಜರುಗುವ ಮಾಹಿತಿ ನಮೂದು ಮಾಡುವ ಸಂಪ್ರದಾಯವಿಲ್ಲ. ಮುಂಬರುವ ದಿನಗಳಲ್ಲಿ ಇದನ್ನು ಅಳವಡಿಸಲಾಗುವುದು. ಕೋವಿಡ್–19 ಹಿನ್ನೆಲೆಯಲ್ಲಿ ಜಿಲ್ಲಾಸಮಿತಿಗಳ ರಚನಾ ಕಾರ್ಯ ವಿಳಂಬವಾಗಿದ್ದು, ಈಗಾಗಲೇ 31 ಜಿಲ್ಲೆಗಳಲ್ಲಿ ಕರಾವಿಪ ಜಿಲ್ಲಾ ಸಮಿತಿಗಳು ರಚನೆಯಾಗಿದೆ. ಇನ್ನುಳಿದ 4 ಜಿಲ್ಲಾ ಸಮಿತಿಗಳನ್ನು ಆದಷ್ಟು ಶೀಘ್ರವಾಗಿ ರಚಿಸಲಾಗುವುದು. 40ನೇ ವಾರ್ಷಿಕ ಮಹಾಸಭೆ ಆಯೋಜಿಸುವ ಕುರಿತು ದಿನಾಂಕ 25.02.2022 ರಂದು ಜರುಗಿದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿ ಮುಂದಿನ ಕ್ರಮ ಕೈಗೊಳ್ಳಲು ಕಚೇರಿಗೆ ತಿಳಿಸಲಾಗಿತ್ತು. ಕಚೇರಿಯಲ್ಲಿನ ಸಿಬ್ಬಂದಿಗಳ ಕೊರತೆ, ಲೆಕ್ಕಪರಿಶೋಧಕರ ಅನಾರೋಗ್ಯದಿಂದ ಆಡಿಟ್ ವರದಿ ತಡವಾಗಿ ಕಚೇರಿಗೆ ಬಂದಿದ್ದರಿಂದ ಹಾಗೂ ಅಂಚೆ ಕಚೇರಿಯಲ್ಲಿ ಸುಮಾರು 10,000 ಕ್ಕೂ ಹೆಚ್ಚು ಸದಸ್ಯರ ನೋಟೀಸ್‌ಗಳನ್ನು ಒಂದೇ ದಿನ ಪೋಸ್ಟ್ ಮಾಡಲು ಸಾಧ್ಯವಿಲ್ಲವೆಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದರಿಂದ ಹಂತ ಹಂತವಾಗಿ ದಿನಾಂಕ 05.03.2022 ರಿಂದ ನೋಟೀಸ್‌ಗಳನ್ನು ಪೋಸ್ಟ್ ಮಾಡಲಾಗಿದೆ. ಅಲ್ಲದೆ, ಸದಸ್ಯರಿಗೆ ಸಾಕಷ್ಟು ಮುಂಚೆ ಸಭೆಯ ಮಾಹಿತಿ ತಲುಪಲಿ ಎಂಬ ಕಾರಣಕ್ಕಾಗಿ ಸಾಮಾಜಿಕ ಜಾಲತಾಣ, ಕರಾವಿಪ ವೆಬ್‌ಸೈಟ್‌ನಲ್ಲಿ ಸಭೆಯ ಸೂಚನಾ ಪತ್ರ ಅಪ್‌ಲೋಡ್ ಮಾಡಿದ್ದಲ್ಲದೆ, ಪತ್ರಿಕೆಗಳಲ್ಲಿಯೂ ಸಹ ಜಾಹೀರಾತು ನೀಡಲಾಗಿತ್ತು.

**ಶ್ರೀ ಎನ್.ಆರ್. ಮಂಜುನಾಥ್ :** ವಾರ್ಷಿಕ ವರದಿಯಲ್ಲಿ ಫಲಾನುಭವಿಗಳ ಸಂಖ್ಯೆಯನ್ನು ಅಂದಾಜು / ಸುಮಾರು ಎಂದು ನಮೂದಿಸಿರುವಿರಿ. ಭಾಗವಹಿಸಿದವರ ಸಂಖ್ಯೆ ನಿಖರವಾಗಿಲ್ಲವೇ ?

**ಸ್ಪಷ್ಟೀಕರಣ :** ಪರಿಷತ್ತಿನ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸುವಾಗ ಕೆಲವರು ಪ್ರತ್ಯಕ್ಷವಾಗಿ ಅದರ ಪ್ರಯೋಜನವನ್ನು ಪಡೆದುಕೊಂಡರೆ ಪರೋಕ್ಷವಾಗಿ ಅದು ಇನ್ನೂ ಅನೇಕರನ್ನು ತಲುಪಿರುತ್ತದೆ. ಹೀಗಾಗಿ ಅಂದಾಜು / ಸುಮಾರು ಸಂಖ್ಯೆ ನಮೂದಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ನೋಂದಣಿ ಪಟ್ಟಿಯಲ್ಲಿದ್ದಂತೆ ನಿಖರ ಸಂಖ್ಯೆಯನ್ನು ನಮೂದಿಸಲಾಗುವುದು.

**ಶ್ರೀ ಸಿದ್ಧರಾಜು, ಬೆಂಗಳೂರು :** ಪರಿಷತ್ತಿನ ಉಪಸಮಿತಿಗಳ ಮೂಲಕ ಆಯೋಜಿಸಲಾದ ಚಟುವಟಿಕೆಗಳ ವಿವರ ವಾರ್ಷಿಕ ವರದಿಯಲ್ಲಿ ಏಕೆ ನಮೂದಿಸಿಲ್ಲ ?

**ಸ್ಪಷ್ಟೀಕರಣ :** ಪರಿಷತ್ತಿನ ಅಭಿವೃದ್ಧಿ ಹಾಗೂ ವಿವಿಧ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉಪಸಮಿತಿಗಳನ್ನು ರಚಿಸಲಾಗಿದ್ದು, ಅವುಗಳ ಸಲಹೆಯೊಂದಿಗೆ ವೈಜ್ಞಾನಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಉಪಸಮಿತಿಗಳ ಚಟುವಟಿಕೆಗಳೂ ಸಹ ಪರಿಷತ್ತಿನ ಚಟುವಟಿಕೆಗಳೇ ಆಗಿರುವುದರಿಂದ ಪ್ರತ್ಯೇಕವಾಗಿ ಉಪಸಮಿತಿಗಳ ಹೆಸರು ವರದಿಯಲ್ಲಿ ನಮೂದಿಸಿಲ್ಲ.

**ಶ್ರೀ ರವೀಂದ್ರ ಸಿರಿವರ, ಬೆಂಗಳೂರು :** ಜಿಲ್ಲಾಸಮಿತಿಗಳ ಚಟುವಟಿಕೆಗಳ ವರದಿ ವಾರ್ಷಿಕ ವರದಿಯಲ್ಲಿ ಏಕೆ ನಮೂದಾಗಿಲ್ಲ ?

**ಸ್ಪಷ್ಟೀಕರಣ :** ಮಹಾಸಭೆಯ ಕಾರ್ಯಸೂಚಿಯಲ್ಲಿ ತಿಳಿಸಿದಂತೆ ಜಿಲ್ಲಾಸಮಿತಿಗಳ ವರದಿಗಳನ್ನು ಪ್ರತ್ಯೇಕವಾಗಿ ಸಭೆಯ ದಿನದಂದೇ ಸ್ವೀಕರಿಸುವುದರಿಂದ ವಾರ್ಷಿಕ ವರದಿಯಲ್ಲಿ ಜಿಲ್ಲಾಸಮಿತಿಗಳ ವರದಿ ನಮೂದಾಗಿಲ್ಲ. ಮುಂದಿನ ದಿನಗಳಲ್ಲಿ

ಜಿಲ್ಲಾಸಮಿತಿಗಳ ವರದಿಯನ್ನೂ ಸಹ ಮುಂಚಿತವಾಗಿ ಪಡೆದು ವಾರ್ಷಿಕ ವರದಿಯಲ್ಲಿ ಸೇರ್ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಸುದೀರ್ಘ ಚರ್ಚೆಯ ನಂತರ 2019–20ನೇ ಸಾಲಿನ ವಾರ್ಷಿಕ ವರದಿಗೆ ಸದಸ್ಯರು ಅನುಮೋದನೆ ನೀಡಿದರು.
ಸೂಚಕರು : ಶ್ರೀ ಜಿ. ವೆಂಕಟೇಶ್, ಬೆಂಗಳೂರು ಅನುಮೋದಕರು : ಶ್ರೀ ರವೀಂದ್ರನಾಥ್ ಸಿರಿವರ, ಬೆಂಗಳೂರು.

**4. 2020–21ನೇ ಸಾಲಿನ ಲೆಕ್ಕಪರಿಶೋಧಕರ ವರದಿ ಕುರಿತು ಖಜಾಂಚಿಯವರಿಂದ ಮಂಡನೆ ಹಾಗೂ ಅನುಮೋದನೆ.**

2020–21ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಕರಾವಿಪ ಖಜಾಂಚಿಯವರಾದ ಶ್ರೀ ಈ. ಬಸವರಾಜು ರವರು ಸಭೆಯಲ್ಲಿ ಮಂಡಿಸಿ ಮಾತನಾಡಿದ ಅವರು ಕರಾವಿಪದ ಈಗಿನ ಲೆಕ್ಕಪರಿಶೋಧಕರು ಅನಾರೋಗ್ಯ, ಅಲಕ್ಷ್ಯತನ ತೋರಿದ್ದರಿಂದ ಲೆಕ್ಕಪರಿಶೋಧಕರ ವರದಿ ವಿಳಂಬವಾಗಿ ಕಚೇರಿಗೆ ತಲುಪಿದೆ. ಹೀಗಾಗಿ ವಾರ್ಷಿಕ ಮಹಾಸಭೆಯು ವಿಳಂಬವಾಗಿ ಜರುಗುತ್ತಿದೆ. ಸರ್ಕಾರದ ಅನುದಾನ, ಪುಸ್ತಕ ಮಾರಾಟ, ಕಚೇರಿ ಬಾಡಿಗೆ, ಬಾಲವಿಜ್ಞಾನದ ಚಂದಾ ಮೊತ್ತ, ದಾನಿ ಸದಸ್ಯತ್ವ ಶುಲ್ಕ ಇವುಗಳು ಪರಿಷತ್ತಿನ ಆದಾಯ ಮೂಲಗಳಾಗಿವೆ. ಪರಿಷತ್ತಿನ 2020–21ನೇ ಸಾಲಿನಲ್ಲಿ ಖರ್ಚು ಮಾಡಲಾದ ಹಣದ ವಿವರವನ್ನು ತಮಗೆ ಈಗಾಗಲೇ ನೀಡಾಗಿದ್ದು, ಬಾಲೆನ್ಸ್ ಶೀಟ್ ಹಾಗೂ ಸಂಬಂಧಪಟ್ಟ ಅನುಬಂಧಗಳನ್ನು ತಾವು ಪರಿಶೀಲಿಸಬಹುದಾಗಿದೆ ಎಂದರು. ಪ್ರಸ್ತುತ ಪರಿಷತ್ತಿನಲ್ಲಿ ಟ್ಯಾಲಿ ಜೊತೆಗೆ ಕ್ಯಾಶ್ ಬುಕ್ ಸಹ ನಿರ್ವಹಣೆ ಮಾಡಲಾಗುತ್ತಿದ್ದು, ನಗದು ಇದ್ದರೆ ಅದರ ಡಿನಾಮಿನೇಶನ್ಸ್ ಸಹ ಬರೆದಿಡಲಾಗಿದೆ. ಈ ಹಿಂದೆ ಪರಿಷತ್ತಿನಲ್ಲಿ 16 ಜನ ಸಿಬ್ಬಂದಿ ಇದ್ದು ಸುಮಾರು ರೂ. 90.00 ಲಕ್ಷದಷ್ಟು ಹಣ ಅವರ ವೇತನ ಪಾವತಿಗೆ ಬೇಕಾಗುತ್ತಿತ್ತು. ಪ್ರಸ್ತುತ ಕೇವಲ 8 ಜನ ಸಿಬ್ಬಂದಿಗಳು ಮಾತ್ರ ಇದ್ದು, ರೂ. 35.00 ಲಕ್ಷಗಳಷ್ಟು ಹಣ ಸಾಕಾಗುತ್ತದೆ. ಸಿಬ್ಬಂದಿ ವೇತನ ಸೇರಿದಂತೆ ಕಚೇರಿ ನಿರ್ವಹಣೆಗೆ ರೂ.50.00 ಲಕ್ಷ ಹಣ ಬೇಕಾಗಬಹುದು. ಬಾಲವಿಜ್ಞಾನ ಮಾಸಪತ್ರಿಕೆಯ ಆಜೀವ ಸದಸ್ಯರಿಗೆ ಮತ್ತು ಚಂದಾದಾರರಿಗೆ ಕಳುಹಿಸಲು ಅಂದಾಜು ರೂ. 10.00 ಲಕ್ಷಗಳು ವಾರ್ಷಿಕ ವೆಚ್ಚ ತಗಲುವ ಸಾಧ್ಯತೆ ಇದೆ. ಇದು ತುಂಬಾ ದುಬಾರಿಯಾಗುತ್ತಿದ್ದು ಆಜೀವ ಸದಸ್ಯರಿಂದ ವಾರ್ಷಿಕ ಚಂದಾ ಹಣದ ಶೇ.75% ರಷ್ಟು ಹಣ ಪಡೆದು ಪತ್ರಿಕೆ ಅವರಿಗೆ ಕಳುಹಿಸಬಹುದಾಗಿದೆ ಎಂದರು.

ರಾಷ್ಟ್ರೀಯ ಪರಿಸರ ಜಾಗೃತಿ ಆಂದೋಲನ (NEAC)ಕ್ಕೆ ಈ ಹಿಂದೆ ಪರಿಷತ್ತು ಪ್ರಾದೇಶಿಕ ಸಂಪನ್ಮೂಲ ಸಂಸ್ಥೆ (RRA) ಯಾಗಿ ಕಾರ್ಯನಿರ್ವಹಿಸುತ್ತಿತ್ತು. ಅದಕ್ಕೆ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದಿಂದ ಅನುದಾನ ಸಹ ಮಂಜೂರಾಗುತ್ತಿತ್ತು. 1991 ರಿಂದ 2004ರ ವರೆಗಿನ RRA ಬಾಕಿ ಹಣವನ್ನು ಕೇಂದ್ರ ಸರ್ಕಾರ ಇದುವರೆಗೂ ಪಾವತಿಸಿರುವುದಿಲ್ಲ. ಈ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳಾದರೂ ಪರಿಷತ್ತಿಗೆ ಬರಬೇಕಿರುವ ಬಾಕಿ ಹಣ ರೂ. 25,55,681/– ಬಂದಿರುವುದಿಲ್ಲ. ಪ್ರಸ್ತುತ ಸದರಿ ಯೋಜನೆಯನ್ನು ಕೇಂದ್ರ ಸರ್ಕಾರ ಕೈಬಿಟ್ಟಿರುವುದರಿಂದ ಆ ಹಣ ಸ್ವೀಕೃತಿಯಾಗುವ ಸಾಧ್ಯತೆಗಳಿಲ್ಲ. ಈ ಹಿನ್ನೆಲೆಯಲ್ಲಿ ರೂ. 25,55,681/– ಗಳ ಹಣವನ್ನು Bad debts ಎಂದು ಪರಿಗಣಿಸಲು ಸದಸ್ಯರು ಅನುಮತಿ ನೀಡಬೇಕೆಂದು ಕೋರಿದರು. ಈ ಕುರಿತಾದ ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರು ಈ ಕೆಳಗಿನಂತೆ ಅಭಿಪ್ರಾಯಪಟ್ಟರು.

**ಶ್ರೀ ಸಿದ್ಧರಾಜು, ಬೆಂಗಳೂರು :** ಪರಿಷತ್ತಿಗೆ ಹೊರೆಯಾದರೂ ಪರವಾಗಿಲ್ಲ ಬಾಲವಿಜ್ಞಾನ ಮಾಸಪತ್ರಿಕೆಗಾಗಿ ಸದಸ್ಯರಿಂದ ಮತ್ತೆ ಶೇ. 75ರಷ್ಟು ಹಣ ಪಡೆಯುವುದು ಬೇಡ. ಪರಿಷತ್ತಿನ ಪೈಂಟಿಂಗ್ ಹಾಗೂ ಕಾಂಪೌಂಡ್ ವಾಲ್ ದುರಸ್ತಿಗೆಂದು ಹಣ ಖರ್ಚಾಗಿರುವುದು ಆಡಿಟ್ ವರದಿಯಲ್ಲಿ ಕಂಡುಬಂದಿದೆ. ಆದರೆ, ಕಚೇರಿಗೆ ಯಾವುದೇ ಪೇಂಟಿಂಗ್ ಮಾಡಿಸಿಲ್ಲ.

**ಸ್ಪಷ್ಟೀಕರಣ :** ಪರಿಷತ್ತಿನ ನೆಲಮಹಡಿ ಬಾಡಿಗೆ ತೆಗೆದುಕೊಳ್ಳುವುದಾಗಿ ಕೆ–ಸ್ವೆಪ್ಸ್‌ನ ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಒಡಂಬಡಿಕೆ ಮಾಡಿಕೊಂಡಿದ್ದರು. ಅದರಂತೆ, ಕಚೇರಿಯ ನೆಲಮಹಡಿಗೆ ಪೇಂಟಿಂಗ್ ಮಾಡಿಸಲಾಗಿತ್ತು. ಕಚೇರಿಯ ದಕ್ಷಿಣ ಭಾಗದಲ್ಲಿರುವ ಕಾಂಪೌಂಡ್ ಕುಸಿದಿದ್ದರಿಂದ ಅದನ್ನು ದುರಸ್ತಿಗೊಳಿಸಿ ಕಾಂಪೌಂಡ್ ಗೋಡೆಯ ಎತ್ತರವನ್ನು ಸಹ ಹೆಚ್ಚಿಸಲಾಗಿದೆ.

**ಶ್ರೀ ರವೀಂದ್ರ ಸಿರಿವರ, ಬೆಂಗಳೂರು. :** ಕಚೇರಿಯ ಸಿಬ್ಬಂದಿಗಳ ವೇತನ ಡಿ.ಎಸ್.ಟಿ. ಯಿಂದ ನಿಂತು ಹೋಗಿದೆ ಎಂಬುದು ತಿಳಿದುಬಂದಿದೆ. ಈ ನಿಟ್ಟಿನಲ್ಲಿ ಪದಾಧಿಕಾರಿಗಳ ಪ್ರಯತ್ನ ಏನಾದರೂ ನಡೆದಿದೆಯೇ?

**ಸ್ಪಷ್ಟೀಕರಣ :** ಪರಿಷತ್ತಿನ ಸಿಬ್ಬಂದಿಗಳಿಗೆ ಈ ಹಿಂದೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವತಿಯಿಂದ ಪ್ರತ್ಯೇಕವಾಗಿ ಮಾನವ ಸಂಪನ್ಮೂಲಕ್ಕೆಂದು ಅನುದಾನ ಬಿಡುಗಡೆಯಾಗುತ್ತಿತ್ತು. ಪ್ರಸ್ತುತ ಕಳೆದ 3 ವರ್ಷಗಳಿಂದ ಮಾನವ ಸಂಪನ್ಮೂಲಕ್ಕೆಂದು ಸರ್ಕಾರ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ

ಇಲಾಖೆಯ ಸಚಿವರನ್ನು ಹಾಗೂ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮನವಿ ಪತ್ರ ಸಲ್ಲಿಸಲಾಗಿದ್ದು, ಈ ಪ್ರಕ್ರಿಯೆ ಈಗ ಪ್ರಗತಿಯಲ್ಲಿದೆ.

**ಶ್ರೀ ಜಿ ವೆಂಕಟೇಶ್ :** ಬಾಲವಿಜ್ಞಾನ ಮಾಸಪತ್ರಿಕೆಯನ್ನು ವಾರ್ಷಿಕ ಚಂದಾದಾರರಿಗೆ ಮಾತ್ರ ಅಂಚೆ ಮೂಲಕ ಕಳುಹಿಸಿ. ಇನ್ನುಳಿದ ಸದಸ್ಯರಿಗೆ ಇ–ಮೇಲ್, ವಾಟ್ಸಾಪ್ ಸೇರಿದಂತೆ ಡಿಜಿಟಲ್ ರೂಪದಲ್ಲಿ ಕಳುಹಿಸಿ. ಸದಸ್ಯರ ಇ–ಮೇಲ್ ಅಥವಾ ವಾಟ್ಸಾಪ್ ಸಂಖ್ಯೆ ನೀಡುವಂತೆ ಬಾಲವಿಜ್ಞಾನ ಮಾಸಪತ್ರಿಕೆಯಲ್ಲಿ ಸತತ ಮೂರು ತಿಂಗಳು ಪ್ರಕಟಿಸಿ.

**ಶ್ರೀ ಎಂ.ಇ. ಮೊಹಿನುದ್ದೀನ್, ಕೊಡಗು :** ಬಾಲವಿಜ್ಞಾನ ಮಾಸಪತ್ರಿಕೆಯನ್ನು ಡಿಜಿಟಲ್ ರೂಪದಲ್ಲಿ ಕಳುಹಿಸುವುದು ಬೇಡ. ಬದಲಿಗೆ ಈಗಿನಂತೆ ಅಂಚೆ ಮೂಲಕವೇ ಕಳುಹಿಸಿ.

**ಶ್ರೀ ಸಿ.ಎಸ್. ಮಹಾಬಲೇಶ್ವರ, ಬೆಂಗಳೂರು :** ಸರ್ಕಾರದಿಂದ ಹೆಚ್ಚಿನ ಅನುದಾನ ತರಲು ಪದಾಧಿಕಾರಿಗಳು ಸೇರಿದಂತೆ ಕಾರ್ಯಕಾರಿ ಸಮಿತಿ ಸದಸ್ಯರೂ ಸಹ ಪ್ರಯತ್ನಿಸಬೇಕು. ಪರಿಷತ್ತಿನ ವತಿಯಿಂದ ಹಮ್ಮಿಕೊಳ್ಳುವ ಗಣಿತ ಕಾರ್ಯಾಗಾರಕ್ಕೆ ಸಂಭಾವನೆ ರಹಿತವಾಗಿ ಕಾರ್ಯನಿರ್ವಹಿಸುವ ಸಂಪನ್ಮೂಲ ವ್ಯಕ್ತಿಗಳಿದ್ದು, ಅವರ ಸಹಾಯ ಪಡೆದುಕೊಳ್ಳಬಹುದು.

**ಶ್ರೀ ಎನ್.ಆರ್. ಮಂಜುನಾಥ್, ಮೈಸೂರು. :** ಬಾಲವಿಜ್ಞಾನ ಮಾಸಪತ್ರಿಕೆ ಪರಿಷತ್ತಿನ ಮುಖವಾಣಿ ಇದ್ದಂತೆ. ಇದಕ್ಕೆ ತಗಲುವ ಖರ್ಚನ್ನು ಕರಾವಿಪಕ್ಕೆ ಹೊರೆ ಎಂದು ಭಾವಿಸಬಾರದು. ಅಗತ್ಯ ಬಿದ್ದರೆ ಸರ್ಕಾರ ಹಾಗೂ ಇತರೆ ಸಂಘಸಂಸ್ಥೆಗಳಿಂದ ಸಂಪನ್ಮೂಲಗಳ ಕ್ರೋಢೀಕರಣ ಮಾಡಿಕೊಳ್ಳಬೇಕು.

**ಶ್ರೀ ರವೀಂದ್ರ ಸಿರಿವರ, ಬೆಂಗಳೂರು :** ರಾಜ್ಯದಲ್ಲಿ ಸುಮಾರು 6650 ಗ್ರಾಮ ಪಂಚಾಯತಿಗಳಿಂದ ನಡೆಸುವ ಗ್ರಂಥಾಲಯಗಳಿದ್ದು, ಅವರಿಂದ ವಾರ್ಷಿಕ ಚಂದಾ ಹಣ ಸಂಗ್ರಹಿಸಿ ಬಾಲವಿಜ್ಞಾನ ಮಾಸಪತ್ರಿಕೆ ಕಳುಹಿಸಲು ಪ್ರಯತ್ನಿಸಬೇಕು.

**ಶ್ರೀಮತಿ ಶ್ರೀಮತಿ ಹರಿಪ್ರಸಾದ್, ಮೈಸೂರು :** ಅಂಚೆ ಇಲಾಖೆಯವರು ವರ್ಷದಲ್ಲಿ ಎರಡು ವಿಶೇಷ ಸಂಚಿಕೆ ಹೊರತರಲು ಅನುಮತಿ ನೀಡಿದ್ದು, ಅದರಂತೆ, ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಈ ಬಾರಿ ವಿಶೇಷ ಸಂಚಿಕೆ ಹೊರತರಲು ಯೋಜಿಸಲಾಗಿದೆ. ಈಗಾಗಲೇ 32 ಜನ ಲೇಖಕರು ಲೇಖನ ಕಳುಹಿಸುವುದಾಗಿ ಒಪ್ಪಿಕೊಂಡಿದ್ದು, ಅವರಲ್ಲಿ 4 ಜನ ವಿಶ್ವವಿದ್ಯಾಲಯ ಉಪಕುಲಪತಿಗಳಿದ್ದಾರೆ. ವಿವಿಧ ಸಂಘಸಂಸ್ಥೆಗಳಿಂದ ಜಾಹೀರಾತುಗಳನ್ನು ಸಂಗ್ರಹಿಸಲಾಗುತ್ತಿದ್ದು, ಮಾನ್ಯ ಸದಸ್ಯರು ಸಹ ಈ ನಿಟ್ಟಿನಲ್ಲಿ ಪ್ರಯತ್ನಿಸಬೇಕು.

ಸುದೀರ್ಘ ಚರ್ಚೆಯ ನಂತರ 2020–21ನೇ ಸಾಲಿನ ಲೆಕ್ಕಪರಿಶೋಧಕರ ವರದಿಗೆ ಸಭೆ ಅನುಮೋದನೆ ನೀಡಿತು.
**ಸೂಚಕರು :** ಶ್ರೀ ಜಿ.ಬಿ. ಸಂತೋಷ್‌ಕುಮಾರ್, ಮೈಸೂರು **ಅನುಮೋದಕರು** : ಶ್ರೀ ಸಿದ್ಧರಾಜು, ಬೆಂಗಳೂರು.

5. **ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಘಟಕ / ಜಿಲ್ಲಾಸಮಿತಿಗಳಿಂದ 2020–21ನೇ ಸಾಲಿನ ಕಾರ್ಯಚಟುವಟಿಕೆಗಳ ಲಿಖಿತ ವರದಿ ಮಂಡನೆ.**
ಕರಾವಿಪ ಕೊಡಗು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ.ಜಿ. ಪ್ರೇಮ್‌ಕುಮಾರ್ ಇವರು ಕೊಡಗು ಜಿಲ್ಲಾಸಮಿತಿಯ ವರದಿಯನ್ನು ಮಂಡಿಸಿ "ವಿದ್ಯಾರ್ಥಿ–ವಿಜ್ಞಾನಿ ನೇರ ಸಂವಾದ" ಕಾರ್ಯಕ್ರಮವನ್ನು ಪುನ: ಪ್ರಾರಂಭಿಸುವಂತೆ ಸಲಹೆ ನೀಡಿದರು.

6. **2021–22 ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ ಕುರಿತು.**
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನಲ್ಲಿ ಪ್ರಸ್ತುತ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಿ.ಆರ್. ಮುರುಳಿ ಇವರನ್ನು 2021–22ನೇ ಸಾಲಿಗೆ ಲೆಕ್ಕಪರಿಶೋಧಕರಾಗಿ ಮುಂದುವರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

7. **ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು**
ವಾರ್ಷಿಕ ಮಹಾಸಭೆಯಲ್ಲಿ "ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳ" ಅಡಿಯಲ್ಲಿ ಚರ್ಚಿಸಲು ಕೋರಿ ಕೆಲವು ಸದಸ್ಯರು ಕಚೇರಿಗೆ ಪತ್ರ ಬರೆದಿರುವ ಕುರಿತು ಅಧ್ಯಕ್ಷರು ಸಭೆಗೆ ಮಾಹಿತಿ ನೀಡಿದರು.

7.1 **ಶ್ರೀ ಎನ್.ಆರ್. ಮಂಜುನಾಥ್ :** ವಾರ್ಷಿಕ ಮಹಾಸಭೆಯ ಕಾರ್ಯಸೂಚಿ ತಡವಾಗಿ ತಲುಪಿರುವುದು, ಸಾಮಾಜಿಕ ಜಾಲತಾಣಗಳಲ್ಲಿ ಕರಾವಿಪ ಭ್ರಷ್ಟಾಚಾರದ ವದಂತಿ, ಸೈನ್ಸ್ ಮ್ಯಾತ್ಸ್ ಒಲಂಪಿಯಾಡ್ ಸ್ಪರ್ಧೆ ಮುಂದುವರೆಸುವುದು ಹಾಗೂ ಕರಾವಿಪ ಕಾರ್ಯಕಾರಿ ಸಮಿತಿಯ ಅವಧಿಯನ್ನು 5 ವರ್ಷಕ್ಕೆ ವಿಸ್ತರಿಸುವ ಕುರಿತು.

**ಅಧ್ಯಕ್ಷರ ಸ್ಪಷ್ಟೀಕರಣ :** ವಾರ್ಷಿಕ ಮಹಾಸಭೆಯ ನಿಮಿತ್ತ ಪರಿಷತ್ತಿನ 10,000ಕ್ಕೂ ಹೆಚ್ಚು ಸದಸ್ಯರೆಲ್ಲರಿಗೂ ನೋಟೀಸ್ ಕಳುಹಿಸಬೇಕಾಗುತ್ತದೆ. ಕಚೇರಿಯಲ್ಲಿನ ಸಿಬ್ಬಂದಿಯ ಕೊರತೆ ಹಾಗೂ ಪೋಸ್ಟ ಆಫೀಸಿನ ಕಾರ್ಯಭಾರದ ಹಿನ್ನೆಲೆಯಲ್ಲಿ ಒಂದೇ ದಿನ ಎಲ್ಲವನ್ನೂ ಪೋಸ್ಟ್ ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ ವಾರ್ಷಿಕ ಮಹಾಸಭೆಯ ನೋಟೀಸ್ ಅನ್ನು ಮಾರ್ಚ 5 ರಿಂದ ಹಂತ ಹಂತವಾಗಿ ಕಳುಹಿಸಲಾಗಿದೆ.

ವಾಟ್ಸಪ್ ಹಾಗೂ ಸಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಕರಾವಿಪ ಭ್ರಷ್ಟಾಚಾರ ಕುರಿತಾದ ಸುದ್ದಿಗಳು ಸತ್ಯಕ್ಕೆ ದೂರವಾಗಿದ್ದು, ಇವುಗಳಲ್ಲಿ ಯಾವುದೇ ಸತ್ಯಾಂಶವಿಲ್ಲ.

ವಿದ್ಯಾರ್ಥಿಗಳಲ್ಲಿ ಸ್ಪರ್ದಾತ್ಮಕ ಮನೋಭಾವ ಬೆಳೆಸುವ ಉದ್ದೇಶದಿಂದ ಪರಿಷತ್ತಿನ ವತಿಯಿಂದ ಆಯೋಜಿಸುತ್ತಿದ್ದ ಓಲಂಪಿಯಾಡ್ ಸ್ಪರ್ಧೆಯನ್ನು ಅನುದಾನದ ಕೊರತೆಯಿಂದ ಪ್ರಸ್ತುತ ಹಮ್ಮಿಕೊಳ್ಳಲಾಗುತ್ತಿಲ್ಲ. ಸರ್ಕಾರದಿಂದ ಹೆಚ್ಚುವರಿ ಅನುದಾನ ಬಿಡುಗಡೆಯಾದಲ್ಲಿ ಸದರಿ ಕಾರ್ಯಕ್ರಮ ಮುಂದುವರೆಸಲಾಗುವುದು.

ಕರಾವಿಪ ಬೈಲಾ ನಿಯಮಾವಳಿ ಅನುಸಾರ ಕಾರ್ಯಕಾರಿ ಸಮಿತಿಯ ಅವಧಿ ಕೇವಲ 3 ವರ್ಷಕ್ಕೆ ಸೀಮಿತವಾಗಿದೆ. ಮುಂಬರುವ ದಿನಗಳಲ್ಲಿ ಬೈಲಾ ಪರಿಷ್ಕರಿಸಬೇಕಾದಲ್ಲಿ ವಿಶೇಷ ಮಹಾಸಭೆ ಕರೆದು ತಮ್ಮ ಸಲಹೆ ಕುರಿತು ಚರ್ಚಿಸಲಾಗುವುದು.

7.2 **ಶ್ರೀ ರವೀಂದ್ರನಾಥ್ ಸಿರಿವರ, ಬೆಂಗಳೂರು :** ಕರಾವಿಪ ಬೆಳವಣಿಗೆಯಲ್ಲಿ ಜಿಲ್ಲಾಧ್ಯಕ್ಷರ ಪಾತ್ರ, ಕರಾವಿಪ ಅಭಿವೃದ್ಧಿಗೆ ಪದಾಧಿಗಳ ಪಾತ್ರ, ತ್ರೈವಾರ್ಷಿಕ ಚುನಾವಣೆಗೆ ಕೈಗೊಂಡ ಸರಳ ಕ್ರಮಗಳು.

**ಅಧ್ಯಕ್ಷರ ಸ್ಪಷ್ಟೀಕರಣ :** ಕರಾವಿಪ ಬೈಲಾ ನಿಯಮಾವಳಿ ಪ್ರಕಾರ ವೈಜ್ಞಾನಿಕ ಚಟುವಟಿಕೆಗಳನ್ನು ನಿರ್ವಹಿಸುವುದು ಜಿಲ್ಲಾ ಸಮಿತಿ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಹೊಣೆಯಾಗಿದೆ. ಅವುಗಳಲ್ಲಿ, ಜಿಲ್ಲಾ ಮಟ್ಟದಲ್ಲಿ ವಿಚಾರವೇದಿಕೆ, ಸಭೆ. ಚರ್ಚಾಗೋಷ್ಠಿ, ವಿಚಾರ ಸಂಕಿರಣಗಳನ್ನು ನಡೆಸುವುದು. ಘಟಕಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸಿ ಅವುಗಳ ಕೆಲಸದಲ್ಲಿ ನೆರವು ನೀಡುವುದು. ವಿಜ್ಞಾನ ಪರಿಷತ್ತಿನ ಧ್ಯೇಯೋದ್ದೇಶ ಈಡೇರಿಸಲು ಜಿಲ್ಲಾ ಅಧಿಕಾರಿಗಳೊಡನೆ ಸಂಪರ್ಕ ಬೆಳೆಸುವುದು. ಸಮುದಾಯ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಸಹಾಯ ಮಾಡುವುದು. ಕರಾವಿಪ ಕೇಂದ್ರ ಕಚೇರಿಯಿಂದ ಸೂಚಿಸಿದ ಹಾಗೂ ಕರಾವಿಪದ ಧ್ಯೇಯೋದ್ದೇಶಗಳಿಗೆ ಅನುಗುಣವಾದ ಎಲ್ಲಾ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಉಸ್ತುವಾರಿ ಕಾರ್ಯಕಾರಿ ಸಮಿತಿ ಸದಸ್ಯರ ಜೊತೆಗೂಡಿ ಅನುಷ್ಠಾನಗೊಳಿಸುವುದು ಜಿಲ್ಲಾಧ್ಯಕ್ಷರ ಪ್ರಮುಖ ಪಾತ್ರವಾಗಿದೆ.

ಆರ್ಥಿಕ ಸಂಕಷ್ಟದಲ್ಲಿರುವ ಕರಾವಿಪದ ಅಭಿವೃದ್ದಿಯ ದೃಷ್ಠಿಯಿಂದ ಎಲ್ಲಾ ಪದಾಧಿಕಾರಿಗಳು ಒಟ್ಟಾಗಿ ಸರ್ಕಾರದಿಂದ ಅನುದಾನ ತರಲು ಪ್ರಯತ್ನಿಸುತ್ತಿದ್ದಾರೆ.

ಕರಾವಿಪ ತ್ರೈವಾರ್ಷಿಕ ಚುನಾವಣೆಯ ಕುರಿತು ಮುಂಬರುವ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಲಾಗುವುದು.

7.3 **ಶ್ರೀ ಬಿ.ಎಸ್. ನಾರಾಯಣ ಮೂರ್ತಿ, ಬೆಂಗಳೂರು :** ಲೆಕ್ಕಪತ್ರ ವರದಿಯಲ್ಲಿ ಆಗಿರುವ ಲೋಪದೋಷ, ನಿವೃತ್ತಿ ನೌಕರರ ಬಾಕಿ ಎಚ್.ಆರ್.ಎ., ಸದಸ್ಯತ್ವ ನೋಂದಣಿಗಾಗಿ ಜಮೆ ಆಗಿರುವ ಹಣ ಇತ್ಯಾದಿ

**ಅಧ್ಯಕ್ಷರ ಸ್ಪಷ್ಟೀಕರಣ :** ಪರಿಷತ್ತಿನಲ್ಲಿ ಆರ್ಥಿಕ ಸಂಪನ್ಮೂಲದ ಕೊರತೆ ಇರುವುದರಿಂದ ನಿವೃತ್ತ ಸಿಬ್ಬಂದಿ ಸೇರಿದಂತೆ ಕಚೇರಿಯಲ್ಲಿನ ಯಾವ ಸಿಬ್ಬಂದಿಗಳಿಗೂ ಬಾಕಿ ಎಚ್.ಆರ್.ಎ. ನೀಡಿಲ್ಲ. ಪರಿಷತ್ತಿನ ಆರ್ಥಿಕ ಸ್ಥಿತಿ ಸುಧಾರಿಸಿದ ಮೇಲೆ ಈ ಬಗ್ಗೆ ತೀರ್ಮಾನಿಸಲಾಗುವುದು.

ದಿನಾಂಕ 25.02.2022 ರಂದು ದಾನಿ ಸದಸ್ಯತ್ವಕ್ಕಾಗಿ ಕಚೇರಿಗೆ ಸುಮಾರು 2541 ಅರ್ಜಿಗಳು ಬಂದಿದ್ದು ಅದಕ್ಕೆ ಸಂಬಂಧಿಸಿದ ಶುಲ್ಕವು ಸಹ ಪರಿಷತ್ತಿನ ಬ್ಯಾಂಕ್ ಖಾತೆಗೆ ಸಂದಾಯವಾಗಿದೆ. ಪರಿಷತ್ತಿನ ನಿಯಮಾನುಸಾರ ಸದಸ್ಯತ್ವ ನೀಡಲಾಗಿದೆ.

ಶ್ರೀ ನಾರಾಯಣಮೂರ್ತಿ ಅವರು ಕೇಳಿರುವ ಬಹುತೇಕ ಪ್ರಶ್ನೆಗಳಿಗೆ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಈಗಾಗಲೇ ಉತ್ತರಿಸಲಾಗಿದೆ.

7.4 **ಶ್ರೀ ಮಹೇಶ್ ದೇವಣಿ, ಕಲಬುರಗಿ :** ಜಿಲ್ಲಾಸಮಿತಿಗೆ ಗೌರವ ಅಧ್ಯಕ್ಷರ ನೇಮಕಾತಿ, ತಾಲ್ಲೂಕು ಸಮಿತಿಯ ರಚನೆ, ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ, ಕಲಬುರಗಿಯಲ್ಲಿ ಕರಾವಿಪ ವಿಭಾಗೀಯ ಕಾರ್ಯಾಲಯ ಸ್ಥಾಪನೆ, ಜಿಲ್ಲಾ ಸಮಿತಿ ಆಯ್ಕೆ ವಿಧಾನ, ಜಿಲ್ಲಾಸಮಿತಿ ಹಾಗೂ ಕಾರ್ಯಕಾರಿ ಸಮಿತಿಯ ಅವಧಿ ವಿಸ್ತರಣೆ.

**ಅಧ್ಯಕ್ಷರ ಸ್ಪಷ್ಟೀಕರಣ :** ಜಿಲ್ಲಾಸಮಿತಿಗಳಿಗೆ ಗೌರವ ಅಧ್ಯಕ್ಷರ ನೇಮಕಾತಿಯ ಬಗ್ಗೆ ಪರಿಷತ್ತಿನ ಬೈಲಾದಲ್ಲಿ ಯಾವುದೇ ಉಲ್ಲೇಖವಿಲ್ಲ. ಆ ಜಿಲ್ಲೆಯಲ್ಲಿ ಪ್ರಶ್ನಾತೀತವಾಗಿ ಸರ್ವಾನುಮತದಿಂದ ಯಾರಾದರೂ ಆಯ್ಕೆಯಾದಲ್ಲಿ ಸಮ್ಮತಿಸಬಹುದಾಗಿದೆ.

ರಾಜ್ಯದ ಯಾವುದೇ ತಾಲೂಕಿನಲ್ಲಿ 25 ಕ್ಕೂ ಹೆಚ್ಚು ಕರಾವಿಪ ಸದಸ್ಯರಿದ್ದರೆ ಅಂತಹ ತಾಲೂಕುಗಳಲ್ಲಿ ಪರಿಷತ್ತಿನ ತಾಲೂಕು ಸಮಿತಿ ರಚಿಸಬಹುದಾಗಿದೆ. ಇದುವರೆಗೂ ತಾಲ್ಲೂಕಾ ಸಮಿತಿಗಳ ರಚನೆಯಾಗಿಲ್ಲ. ರಾಜ್ಯದ ಜಿಲ್ಲಾಸಮಿತಿಗಳ ರಚನಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾರ್ಯಕಾರಿಸಮಿತಿ ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಪರಿಷತ್ತಿನ ವತಿಯಿಂದ ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ ನೀಡುವ ಬಗ್ಗೆ ಇದುವರೆಗೂ ಯಾವುದೇ ತೀರ್ಮಾನ ಕೈಗೊಂಡಿರುವುದಿಲ್ಲ.

ಕಲಬುರಗಿಯಲ್ಲಿ ಕರಾವಿಪ ವಿಭಾಗೀಯ ಕಾರ್ಯಾಲಯ ಸ್ಥಾಪಿಸುವ ಉದ್ದೇಶ ಪರಿಷತ್ತು ಹೊಂದಿದೆ. ಈ ಕುರಿತಂತೆ ಈಗಾಗಲೇ ಹಲವು ಬಾರಿ ಚರ್ಚಿಸಲಾಗಿದೆ. ಮುಂದಿನ ದಿನಗಳಲ್ಲಿ ಕರಾವಿಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಆದಷ್ಟು ಶೀಘ್ರವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾ ಸಮಿತಿ ಆಯ್ಕೆ ವಿಧಾನದ ಬದಲಾವಣೆ, ಜಿಲ್ಲಾಸಮಿತಿ ಹಾಗೂ ಕಾರ್ಯಕಾರಿ ಸಮಿತಿಯ ಅವಧಿಯ ವಿಸ್ತರಣೆ ಕುರಿತು ಬೈಲಾ ಪರಿಷ್ಕರಣೆ ಸಂದರ್ಭದಲ್ಲಿ ವಿಶೇಷ ಮಹಾಸಭೆ ಕರೆದು ತೀರ್ಮಾನಿಸಲಾಗುವುದು.

7.5 **ಪ್ರೊ॥ ಸಿ.ಡಿ. ಪಾಟೀಲ, ಹುಬ್ಬಳ್ಳಿ :** ಇವರು ಗೌರವ ಕಾರ್ಯದರ್ಶಿಗಳಿಗೆ ಬರೆದ ಪತ್ರದ ಕುರಿತು ಅಧ್ಯಕ್ಷರು ಸಭೆಯಲ್ಲಿ ಪ್ರಸ್ತಾಪಿಸಿದರು. ಶ್ರೀಯುತರು ಅಸಭ್ಯವಾಗಿ ಪತ್ರ ಬರೆದಿರುವುದಲ್ಲದೆ, ಅವರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುವುದರಿಂದ ಸದಸ್ಯರೆಲ್ಲರೂ ಅದನ್ನು ಖಂಡಿಸಿದರು ಹಾಗೂ ಶ್ರೀಯುತರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಸಭೆ ಒತ್ತಾಯಿಸಿತು.

7.6 ಶ್ರೀ ಮೊಹಿನುದ್ದೀನ್, ಶ್ರೀ ಸಿದ್ಧರಾಜು ಸೇರಿದಂತೆ ಕೆಲವು ಸದಸ್ಯರು ದಿನಾಂಕ 25.02.2022 ರಂದು ಕರಾವಿಪ ಕಚೇರಿಗೆ ಬಂದಿರುವ ದಾನಿ ಸದಸ್ಯರ ಅರ್ಜಿಗಳ ಕುರಿತು ತನಿಖೆ ಮಾಡುವಂತೆ ಕೋರಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಹುತೇಕ ಸದಸ್ಯರು 18 ವರ್ಷ ಮೇಲ್ಪಟ್ಟ ಯಾವುದೇ ವಿಜ್ಞಾನಾಸಕ್ತರು ಪರಿಷತ್ತಿನ ಸದಸ್ಯರಾಗಬಹುದೆಂಬ ನಿಯಮವಿರುವುದರಿಂದ ಅನೇಕ ಜನ ಸ್ವ–ಇಚ್ಛೆಯಿಂದ ಸದಸ್ಯರಾಗಿದ್ದಾರೆ. 25.02.2022 ರಂದು ಬೆಂಗಳೂರಿನಲ್ಲಿ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದ್ದರಿಂದ ರಾಜ್ಯದ ವಿವಿಧ ಜಿಲ್ಲೆಗಳಿಂದ ಶಿಕ್ಷಕರು, ವಿದ್ಯಾರ್ಥಿಗಳು, ಪಾಲಕರು ಸೇರಿದಂತೆ ವಿಜ್ಞಾನಾಸಕ್ತರು ಆಗಮಿಸಿದ್ದರು. ಆ ದಿನ ಅವರು ಸಂಗ್ರಹಿಸಿದ ಅರ್ಜಿಗಳೆಲ್ಲವನ್ನೂ ಒಟ್ಟಾಗಿ ಸಲ್ಲಿಸಿರುತ್ತಾರೆ. ಈ ಕುರಿತು ಯಾವುದೇ ತನಿಖೆಯ ಅಗತ್ಯವಿಲ್ಲ. ಪರಿಷತ್ತಿನ ನಿಯಮಾನುಸಾರ ಅರ್ಜಿ ಸಲ್ಲಿಸಿದವರಿಗೆ ಸದಸ್ಯತ್ವ ನೀಡಬೇಕೆಂದು ಬಹುತೇಕ ಸದಸ್ಯರು ಅಭಿಪ್ರಾಯಪಟ್ಟರು.

ಕೊನೆಯಲ್ಲಿ ಮೈಸೂರಿನ ಸದಸ್ಯರಾದ ಶ್ರೀ ಜಿ.ಬಿ. ಸಂತೋಷ್ ಕುಮಾರ್‌ರವರು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆ ಮುಕ್ತಾಯವಾಯಿತು.

(ಸಿ. ಕೃಷ್ಣೇಗೌಡ)
ಗೌರವ ಕಾರ್ಯದರ್ಶಿ